ದಿನಾಂಕ: 24.07.2018 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಖ್ಯ ವಿಚಾರಣೆ: ಶ್ರೀ. ಎಎಸ್‌ಎಫ್ ವಕೀಲರಿಂದಶ್ರೀ. ಎಸ್‌ಕೆ ವಕೀಲರು ವಾದಿ ಪರವಾಗಿ:

ನನ್ನ ಮುಖ್ಯ ವಿಚಾರಣೆಯಾಗಿ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಬರೆಯಲಾಗಿರುವ ಅಂಶಗಳು ನನಗೆ ತಿಳಿದಿದ್ದು ಸತ್ಯಾಂಶಗಳಿಂದ ಕೂಡಿರುತ್ತದೆ.

ಒಂದು ಕಟ್ಟಡದ ನಕ್ಷೆಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ:1 ಎಂದೂ, ಒಂದು ನೋಂದಾಯಿತ ಕ್ರಯಪತ್ರವನ್ನು ಮತ್ತು ಒಂದು ಲೀಸ್ ಕರಾರುಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ:2 ಮತ್ತು 3 ಎಂದೂ, ಹೆಚ್‌ಆರ್‌ಸಿ ನಂಬರು:10064:2013ರಲ್ಲಿನ ಅರ್ಜಿಯ ಮತ್ತು ರಾಜಿ ಅರ್ಜಿಯ ಹಾಗೂ ಎದುರುದಾರರು ಸಲ್ಲಿಸಿರುವ ತಕರಾರುಗಳ ದೃಡೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ:4 ರಿಂದ 7 ಎಂದೂ, ವಕೀಲರ ಮೂಲಕ ಕೊಟ್ಟಿರುವ ಎರಡು ನೋಟೀಸುಗಳ ಕಚೇರಿ ಪ್ರತಿಗಳನ್ನು ಮತ್ತು ಒಂದು ಅಂಚೆ ರಶೀದಿ ಹಾಗೂ ಒಂದು ಅಂಚೆ ಸ್ವೀಕೃತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ:8 ರಿಂದ 11 ಎಂದು ಗುರುತಿಸಲಾಯಿತು. ಆದ್ದರಿಂದ ದಾವೆಯಲ್ಲಿ ಕೇಳಿದಂತೆ ಡಿಕ್ರಿ ಮಾಡಲು ಪ್ರಾರ್ಥನೆ.

ಪಾಟೀಸವಾಲು: ಪ್ರತಿವಾದಿಯಿಂದ

ಪ್ರತಿವಾದಿಯು ವೈಯಕ್ತಿಕವಾಗಿ ಹಾಜರಾಗಿ ಕಾಲಾವಕಾಶ ಕೇಳಿದ್ದು ಆದ್ದರಿಂದ ಪ್ರತಿವಾದಪತ್ರವನ್ನು ಸಲ್ಲಿಸದೇ ಇರುವುರಿಂದ ಏನು ಇಲ್ಲ ಎಂದು ತೆಗೆದುಕೊಳ್ಳಲಾಗಿರುತ್ತದೆ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ

15ನೇ ಅಪರ ನ್ಯಾಯಾಧೀಶರು

ಮತ್ತು ಎಂಎಸಿಟಿ